ಕೈ ಬಲ ಸಾಕಾಗ್ಲಿಲ್ಲ. 'ವಿವೇಕಾ ನೀನೇ ಹಾಕು ಬಾಯಿಗೆ' ಅಂತ ಹೇಳಿದರು. ಇನ್ನೇನು ಅವ ಬಾಯಿಗೆ ಹಾಕ್ಬೇಕು ಅಂದಾಗ ನರ್ಸ ಒಬ್ಬಳು ನೋಡಿ ಬಿಟ್ಟಳು. 'ಏನ್ ಹಾಕ್ತಾ ಇದ್ದೀರಿ ಅವ್ರ ಬಾಯಿಗೆ? ಹಾಗೆಲ್ಲ ಔಟ್‌ಸೈಡಿಂದ ತಂದದ್ದು ಹಾಕೋ ಹಾಗಿಲ್ಲ' ಅಂತ ಕಿರುಚಾಡಿದಳು. ಮಾತ್ರ ಅಲ್ಲ, ಅವ ಹಾಕ್ತಾ ಇದ್ದದ್ದು ಪಾನ್ ಬೀಡಾ ಅಂತ ಗೊತ್ತಾದಾಗ ಗಾಬರಿಯಿಂದ, 'ಓ ಮೈ ಗಾಡ್' ಅಂದಳು. 'ಇಲ್ಲ ಸಿಸ್ಟರ್, ಪ್ರಾಯ ಆದವರು ಅವರ ಆಸೆ...' ವಿವೇಕ ಬಡಬಡಿಸಿದ. 'ನೋಡಿ... ಇದು ಐಸಿಯೂ. ಸಂತೆ ಮಾರ್ಕೆಟ್ ಅಲ್ಲ. ನೀವಾಗಿ ನೀವೇ ಈ ಬೀಡಾ ತಕ್ಕೊಂಡು ಹೋದ್ರೆ ಸರಿ. ಇಲ್ಲಾಂತಾದ್ರೆ ಇನ್‌ಚಾರ್ಜ್ ಡಾಕ್ಟ್ರಿಗೆ ಹೇಳ್ಬೇಕಾಗ್ತದೆ' ಅಂದಳು. ಅಷ್ಟರಲ್ಲಿ ಗಲಾಟೆ ಕೇಳಿ ಐಸಿಯೂ ಇನ್‌ಛಾರ್ಜ್ ಡಾಕ್ಟ್ರೇ ಅಲ್ಲಿಗೆ ಬಂದ್ರು. ವಿಷಯ ಗೊತ್ತಾಗಿ ವಿವೇಕನಿಗೆ ಸಮಾ ಬೈದರು. ಅವ ನಿರಾಸೆಯಿಂದ ರಾಯರ ಮುಖ ನೋಡ್ಲಿಕ್ಕೆ ಆಗದೆ ಬೀಡ ಕೈಯಲ್ಲಿ ಹಿಡ್ಕೊಂಡು ಐಸಿಯೂನಿಂದ ಹೊರಗೆ ಬಂದಿದ್ದ.

ಅದರ ಮರುದಿವಸ ಬೆಳಗ್ಗೆಯೇ ಈ ಕತೆಯ ಸುರೂವಿಗೆ ಹೇಳಿದ ವಿಷಯ ನಡೆದದ್ದು.

ಆಸ್ಪತ್ರೆಯ ಮುಖ್ಯ ಡಾಕ್ಟ್ರು ರಾಯರ ಮಗನಿಗೆ ಫೋನ್ ಮಾಡಿ, 'ನಿಮ್ಮ ಪೇಷೆಂಟನ್ನು ನೋಡ್ಕೊಳ್ಳಿಕ್ಕೆ ಅಂತ ಬಂದವರು ಆಸ್ಪತ್ರೆಯ ರೂಲ್ಸ್ ಬ್ರೇಕ್ ಮಾಡ್ಲಿಕ್ಕೆ ನೋಡಿದ್ರು. ಈ ಸರ್ತಿ ವಾರ್ನ್ ಮಾಡಿದ್ದೇವೆ. ಇನ್ನು ಮುಂದೆ ಹೀಗೆ ಆದ್ರೆ ನಿಮಿಗೆ ತೊಂದರೆ ಆಗುತ್ತೆ' ಅಂತ ಹೇಳಿದ್ರು. ಮಗನಿಗೆ ಇದು ಯಾಕೋ ತೊಂದರೆ ಸುರು ಆಗ್ತದೆ ಅಂತ ಗೊತ್ತಾಯಿತು. ಆವತ್ತು ಆಫೀಸಿಗೆ ರಜೆ ಹಾಕಿ ಸೀದ ಆಸ್ಪತ್ರೆಗೆ ಹೋದ. ಮುಖ್ಯ ಡಾಕ್ಟ್ರನ್ನು ಕಂಡ. 'ಅಪ್ಪನ ಕಂಡೀಷನ್ ಹೇಗಿದೆ? ಕಳೆದ ಹದಿನೈದು ದಿನಗಳಿಂದ ಎಂಥದೂ ಹೇಳಿಕೊಳ್ಳುವ ಇಂಪ್ರೂವ್‌ಮೆಂಟ್ ಇಲ್ಲ ಅಂತ ನೀವೇ ಹೇಳ್ತಾ ಇದ್ದೀರಿ. ಹೀಗಿರುವಾಗ ಡಿಸ್‌ಚಾರ್ಜ್ ಮಾಡಿಸಿಕೊಂಡು ಹೋಗ್ತೇವೆ. ಆಗ್ಬಹುದಲ್ವಾ?' ಅಂತ ಕೇಳಿದ. ಡಾಕ್ಟರು ಒಂದು ನಿಮಿಷ ಆಲೋಚನೆ ಮಾಡಿದರು. 'ಸರಿ ಹಾಗಾದರೆ ಮೂರು ದಿನ ನೋಡ್ತೇನೆ. ಏನಾದ್ರೂ ಸದ್ಯಕ್ಕೆ ಬಚಾವ್ ಆಗಬಹುದು ಅಂತ ಕಂಡು ಬಂದ್ರೆ ಟ್ರೀಟ್‌ಮೆಂಟ್ ಮುಂದುವರಿಸ್ತೇನೆ. ಇಲ್ಲಾಂತಾದ್ರೆ ಡಿಸ್‌ಚಾರ್ಜ್ ಮಾಡಿಸಿಕೊಂಡು ಹೋಗಿ' ಅಂತ ಹೇಳಿದರು.

ಮೂರು ದಿನ ಕಳೀತು. ಅಂಥದ್ದೇನೂ ಸುಧಾರಣೆ ಕಾಣಲಿಲ್ಲ. ಡಾಕ್ಟರು ಡಿಸ್‌ಚಾರ್ಜ್ ಮಾಡಿ ಕಳಿಸಿದರು. ಈ ಸರ್ತಿ ಮಗನ ಮನೆಗೆ ಹೋಗಬಾರದು ಅಂತ ರಾಯರು ಮೊದಲೇ ನಿರ್ಧಾರ ಮಾಡಿದ್ದರು. ಎರಡು ದಿನಗಳ ಮೊದಲೇ ವಿಸಿಟಿಂಗ್ ಟೈಂನಲ್ಲಿ ಬಂದಿದ್ದ ಹೆಂಡತಿ, 'ನಾಡಿದ್ದು ನಿಮ್ಮನ್ನು ಡಿಸ್‌ಚಾರ್ಜ್ ಮಾಡ್ತಾರಂತೆ' ಅಂತ ಹೇಳಿದ್ದರು. ಆಗ ರಾಯರು, 'ನಾನು ಇನ್ನು ಹೆಚ್ಚು ದಿನ ಇರೂದಿಲ್ಲ ಅಂತ ನಂಗೆ ಅನ್ನಿಸ್ತಾ ಉಂಟು. ಇನ್ನು ಹೋದ್ರೆ ಊರಿಗೇ ಹೋಗುದು ನಾನು. ಪ್ರಾಣ ನಂದು ಅಲ್ಲಿಯೇ ಹೋಗ್ಲಿ' ಅಂತ ಹೇಳಿದ್ದರು. 'ಎಂತ ಹೇಳುದು ನೀವು? ಊರಿಗೆ ಹೋದ್ರೆ ನಮಿಗೆ ಯಾರಿದ್ದಾರೆ? ನಂಗೆಸಾ ಕೂಡೂದಿಲ್ಲ' ಅಂತ ಅನಸೂಯಮ್ಮ ಅಳುವ ಧ್ವನಿಯಲ್ಲಿ ಹೇಳಿದರು. 'ಇಲ್ಲಿಯಾದ್ರೂ ನಮಿಗೆ ಯಾರಿದ್ದಾರೆ? ಮಗ ಸೊಸೆ? ಅಳಿಯ ಮಗಳು? ಯಾರೂ ಅಲ್ಲದೇ ಇದ್ದ ವಿವೇಕನೇ ನಂಗೆ ಬಾಯಿಗೆ ನೀರು ಹಾಕ್ತಾನೆ. ಹೀಗಿರುವಾಗ ಇಲ್ಲಿ ಎಂತಕ್ಕೆ ಇರ್ಬೇಕು?' 'ಹಾಗಲ್ಲಾ...' ಅನಸೂಯಮ್ಮ ಎಂಥದೋ ಹೇಳ್ಳಿಕ್ಕೆ ಅಂತ ಬಾಯಿ ತೆಗೆದ್ರು. ನೀನು ಎಂಥದೂ ಹೇಳುದು ಬೇಡ. ನಂಗೆ ಎಲ್ಲ ಸಾ ಗೊತ್ತಾಗ್ತದೆ ಅನ್ನುವ ಹಾಗೆ ಕೈ ಎತ್ತಿ ಸುಮ್ಮನೆ ಇರುವ ಹಾಗೆ ತೋರಿಸಿದ್ರು. ರಾಯರ ಇಚ್ಛೆಯನ್ನು ಮಗನಿಗೆ ಹೇಳಿದರು ಅನಸೂಯಮ್ಮ. 'ವಿವೇಕನೇ ನೋಡಿಕೊಳ್ಳೂದಾದ್ರೆ ನೋಡಿಕೊಳ್ಳಲಿ. ನಂಗೇನು?' ಅಂತ ಮಗ ವಕ್ರವಾಗಿ ಹೇಳಿದ.

ಡಿಸ್‌ಚಾರ್ಜ್ ಆದ ನಂತರ ರಾಯರು ಹೆಂಡತಿ, ವಿವೇಕರೊಟ್ಟಿಗೆ ಊರಿಗೆ ಬಂದರು. ಬಂದ ಒಂದು ವಾರದಲ್ಲಿ ಎಲ್ಲ ಸಹಜ ಸ್ಥಿತಿಗೆ ಬಂತು. ಎಷ್ಟು ಅಂದ್ರೆ ರಾಯರು ಆಕ್ಸಿಜನ್ನಿನ ಸಪೋರ್ಟ್ ಇಲ್ಲದೆ ಒಂದಷ್ಟು ಹೊತ್ತು ಸುಲಭವಾಗಿ ಉಸಿರಾಡುವಷ್ಟು, ಕೋಲು ಹಿಡ್ಕೊಂಡು ನಡಿಯುವಷ್ಟು ಗಟ್ಟಿಯಾದ್ರು.

ಆಸ್ಪತ್ರೆಯಿಂದ ಕಳಿಸಿಕೊಡುವಾಗ, 'ನಿಮ್ಮ ತಂದೆಯವರು ಹೆಚ್ಚು ಅಂದ್ರೆ ವಾರ, ಹತ್ತು ದಿನ ಇರ್ಬಹುದು' ಅಂತ ಡಾಕ್ಟ್ರು ಹೇಳಿದ್ದರು. ಹಾಗಾಗಿ, ಮಗ ಕುತೂಹಲದಿಂದ ವಿವೇಕನಿಗೆ ಬೆಳಗ್ಗೆ ಸಂಜೆ ಫೋನ್ ಮಾಡಿ ಅಪ್ಪ ಹೇಗಿದ್ದಾರೆ? ಅಂತ ಕೇಳ್ತಾ